# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ. 22/2021

**ದೋ.ಸಾ. :31 ಫ್ರಾ.ಸಾ. : 12**

| | | |
|---|---|---|
| ಸಾಕ್ಷಿಯ ಹೆಸರು | : | ಪಿಶು ಯಲ್ಲಪ್ಪ ನಾರ್ವೇಕರ್ |
| ತಂದೆಯ ಹೆಸರು | : | ಯಲ್ಲಪ್ಪ ನಾರ್ವೇಕರ್ |
| ವಯಸ್ಸು | : | 33 ವರ್ಷ |
| ಕೆಲಸ | : | ಸಿಪಿಸಿ-1199, ಪೊಲೀಸ್ ಅರಣ್ಯ ಸಂಚಾರಿ ದಳ, ದಾಂಡೇಲಿ |
| ವಾಸ | : | ದಾಂಡೇಲಿ |

**ದಿನಾಂಕಃ 22-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು ದಿ.05-05-2018 ರಿಂದ ದಿ.07-01-2022 ರವರೆಗೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.15-05-2021 ರಂದು ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-39 ರವರು ಜಪ್ತುಪಡಿಸಿಕೊಂಡ 15 ಸೀಲಾದ ವಸ್ತುಗಳನ್ನು ಆರ್.ಎಫ್.ಎಸ್.ಎಲ್., ಮಂಗಳೂರು ರವರಿಗೆ ಸೂಚಿಸಿದ ಮೇರೆಗೆ, ಸದರಿ ವಸ್ತುಗಳನ್ನು ಕೋರಿಕೆ ಪತ್ರದೊಂದಿಗೆ ಪಡೆದುಕೊಂಡು ನಂತರ ಅವುಗಳನ್ನು ಆರ್.ಎಫ್.ಎಸ್.ಎಲ್., ಮಂಗಳೂರು ರವರಿಗೆ ತಲುಪಿಸಿರುತ್ತೇನೆ. ಹಾಗೂ ಈ ಬಗ್ಗೆ ಸ್ವೀಕೃತಿಯನ್ನು ಪಡೆದುಕೊಂಡು ಬಂದು ಅದೇ ದಿನ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿ, ಹೇಳಿಕೆಯನ್ನು ನೀಡಿರುತ್ತೇನೆ. ಸ್ವೀಕೃತಿ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-54 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

2. ತನಿಖಾಧಿಕಾರಿಯವರು ಸೀಲಾದ ವಸ್ತುಗಳನ್ನು ಕೊಂಡೊಯ್ಯಲು ಲಿಖಿತ ಆದೇಶ ಮಾಡಿರುವುದಿಲ್ಲ. ನಿಪಿ-54 ರಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ 1 ರಿಂದ 15 ರಲ್ಲಿ ಏನೇನು ಇರುತ್ತವೆ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು, ದಾಖಲೆಯನ್ನು ನೋಡಿ

ಹೇಳಬಹುದು, ಆದರೆ ನೋಡದೇ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮಂಗಳೂರಿನ ಆರ್.ಎಫ್.ಎಸ್.ಎಲ್.,ಗೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ ಹಾಗೂ ತನಿಖಾಧಿಕಾರಿಯವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ